ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:	230(1816)
ಸದಸ್ಯರ ಹೆಸರು:	ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ:	24.03.2020
ಉತ್ತರಿಸುವವರು:	ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೀದರ್ ಜಿಲ್ಲೆಯಲ್ಲಿರುವ ಬೀದರ್ ಪಾಪನಾಶ ಕೆರೆಗೆ ಒಳಚರಂಡಿ ನೀರು ಸೇರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು;	ಹೌದು. ಬೀದರ್ ಜಿಲ್ಲೆಯಲ್ಲಿರುವ ಪಾಪನಾಶ ಕೆರೆಗೆ ಶಿವನಗರ ಬಡಾವಣೆ (ವಾರ್ಡ್ ಸಂಖ್ಯೆ 17) ಯಿಂದ ಕಲುಷಿತ ಒಳಚರಂಡಿ (ರೊಚ್ಚು) ನೀರು ಸೇರುತ್ತಿರುವುದನ್ನು ತಡೆಗಟ್ಟಲು ಚಿಕ್ಕ ಸಂಸ್ಕರಣ ಘಟಕವನ್ನು ಲ್ಯಾಂಡ್ ಆರ್ಮಿ (Land Army) ಇಲಾಖೆಯ ವತಿಯಿಂದ ಅಳವಡಿಸಿ ಸಂಸ್ಕರಿಸಿದ ನೀರನ್ನು ಕೆರೆಗೆ ಬಿಡಲಾಗಿತ್ತು. ಆದರೆ, ಸದರಿ ಸಂಸ್ಕರಣಾ ಘಟಕವು ಯಶಸ್ವಿಯಾಗಿ ಕಾರ್ಯನಿರ್ವಹಿಸದ ಕಾರಣ ಜಿಲ್ಲಾಡಳಿತವು ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯ ಪೀಠಕ್ಕೆ ತಿಳಿಸಿದಂತೆ ಏಪ್ರಿಲ್–2020ರೊಳಗಾಗಿ ಒಳಚರಂಡಿ (ರೊಚ್ಚು ನೀರು) – ಸಂಸ್ಕರಣಾ ಘಟಕವನ್ನು ನಿರ್ಮಿಸುವವರೆಗೆ ತಾತ್ಕಾಲಿಕವಾಗಿ ಚರಂಡಿ ನೀರನ್ನು ಬೇರೆಡೆಗೆ ತಿರುಗಿಸಲು ಚರಂಡಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮಾನ್ಯ ನ್ಯಾಯಪೀಠವು ಆದೇಶಿಸಿದಂತೆ ರೂ.50.00 ಲಕ್ಷಗಳನ್ನು 2019–20ನೇ ಸಾಲಿನ 14ನೇ ಹಣಕಾಸು (ಸಾಮಾನ್ಯ ಮೂಲ ಅನುದಾನ) ಯೋಜನೆಯಡಿಯಲ್ಲಿ ಮೀಸಲಿರಿಸಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.
ಆ	ಈ ಪ್ರಕರಣವು ರಾಷ್ಟ್ರೀಯ ಹಸಿರು ನ್ಯಾಯ ಪೀಠದ ಮುಂದಿರುವುದು ನಿಜವೇ?	ಈ (ಅರ್ಜಿ ಸಂಖ್ಯೆ: 371/2019) ಪ್ರಕರಣವು ರಾಷ್ಟ್ರೀಯ ಹಸಿರು ನ್ಯಾಯ ಪೀಠದಿಂದ ದಿನಾಂಕ: 06.12.2019ರಂದು ವಿಲೇವಾರಿ ಮಾಡಲಾಗಿದ್ದು, ಸಂಸ್ಕರಿಸದ ಒಳಚರಂಡಿ ನೀರು ಜಲರಾಶಿಗಳಿಗೆ ಸೇರದಂತೆ ತಡೆಗಟ್ಟಲು ಕ್ರಮಕೈಗೊಳ್ಳುವಂತೆ ಮಾನ್ಯ ನ್ಯಾಯಪೀಠವು ಆದೇಶಿಸಿರುತ್ತದೆ.

ಸಂಖ್ಯೆ: ನಅಇ 59 ಜಿಇಎಲ್ 2020

(ನಾರಾಯಣ ಗೌಡ)
ಪೌರಾಡಳಿತ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವರು